| | |
|---|---|
| ಕ್ರಿಮಿನಲ್‌ಪ್ರಕರಣ ಸಂಖ್ಯೆ | 203/2017 |

ಮಧ್ಯಂತರ ಅರ್ಜಿಯಲ್ಲಿ ಆದ ಆದೇಶದ ಮೇರೆಗೆ;

ದಿನಾಂಕ 20-10-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.

ಚಾಸಾಃ 4 ಫ್ರಾಸಾಃ 4

**ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ವಿ.ಎಂ.ಎಂ. ರವರಿಂದ:**

ಮೃತ ವ್ಯಕ್ತಿಯು ನನ್ನ ಮಗನಾಗಬೇಕು. ಆ ದಿನ ನಿಂಗಣ್ಣ, ಮಲ್ಲಣ್ಣ ಮತ್ತು ಶರಣಬಸವ ಕೂಡಿ ಹೋಗಿದ್ದರು. ನಮ್ಮೂರಿನಿಂದ ಒಂದು ಕಿ.ಮಿ. ಅಂತರದಲ್ಲಿ ಹೊಲ ಇರುತ್ತದೆ. ಸದರಿ ಹೊಲದ ಮಾಲೀಕ ಅಮರೇಶಗೌಡ ಇರುತ್ತಾನೆ ಆತನ ಹೊಲವನ್ನು ಬೂದೆಪ್ಪಗೌಡ ಸಾಗುವಳಿ ಮಾಡಿರುತ್ತಾನೆ. ಸದರಿ ಜಮೀನಿನ ಸರ್ವೆ ನಂಬರ್ ನನಗೆ ಹೇಳಲು ಬರುವುದಿಲ್ಲ. ಸದರಿ ಹೊಲದ

ಸುತ್ತ ಮುತ್ತ ಯಾರ ಜಮೀನುಗಳು ಇರುತ್ತವೆ ಎಂದು ನನಗೆ ಹೇಳಲು ಬರುವುದಿಲ್ಲ ಅವರ ಹೊಲಗಳು ಇರುತ್ತವೆ.

ನಾನು ಗುನ್ನ ಸ್ಥಳಕ್ಕೆ ಹೋದಾಗ ಎಷ್ಟು ಸಮಯ ಆಗಿತ್ತು ಎಂದು ನನಗೆ ತಿಳಿಯುವುದಿಲ್ಲ. ಅಪಘಾತ ಸ್ಥಳದಲ್ಲಿ ಬಹಳಷ್ಟು ಜನರು ಸೇರಿದ್ದರು. ನನ್ನ ಮಗನು ಹೋದ ನಂತರ ಎಷ್ಟು ತಾಸು ನಂತರ ನಾನು ಹೋಗಿರುತ್ತೇನೆ ಎಂದು ನನಗೆ ಹೇಳಲು ಬರುವುದಿಲ್ಲ. ನನ್ನ ಮಗನ ತಲೆಗೆ ಸೋಲಾರ್ ಹತ್ತಿ ಅದರ ದಂಡಿಗೆ ಬಿದ್ದಿದ್ದನು. ನನ್ನ ಮಗನ ಕತ್ತಿಗೆ ಸೋಲಾರ್ ತಂತಿ ಹತ್ತಿತ್ತು. ಜಮೀನಿನ ಯಾವ ದಿಕ್ಕಿನಲ್ಲಿ ಬಿದ್ದಿದ್ದನು ಎಂದು ನನಗೆ ಹೇಳಲು ಬರುವುದಿಲ್ಲ. ಜಮೀನಿನಲ್ಲಿ ಕವಳೆ ಬೆಳೆ ಇತ್ತು. ನಾನು ಹೊಲಕ್ಕೆ ಹೋಗಿ ನೋಡಿರುತ್ತೇನೆಂದು ಪೋಲಿಸರಿಗೆ ನಾನು ಹೇಳಿರುವುದಿಲ್ಲ ಆದರೆ ನನ್ನ ಯಜಮಾನ ಅವರಿಗೆ ಹೇಳಿರುತ್ತಾನೆ. 1 ಮತ್ತು 2 ನೇ ಆರೋಪಿತರ ನಿರ್ಲಕ್ಷತನದಿಂದ ಈ ಪ್ರಕರಣದ ಘಟನೆಯಾಗಿರುತ್ತದೆ ಎಂದು ನಾನು ಪೋಲಿಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ. ನಾನು ಪೋಲಿಸರಿಗೆ ಹೇಳಿಕೆಯನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

ನನಗೆ ನನ್ನ ಮಗನನ್ನು ಕಳೆದುಕೊಂಡ ನೋವು ಇತ್ತು ಹೀಗಾಗಿ ಏನು ಹೇಳಿರುತ್ತೇನೆ ಎಂದು ನನಗೆ ಗೊತ್ತಿರುವುದಿಲ್ಲ. ವಿಧ್ಯುತ್ ಕಂಬ ಗೌಡನ ಹೊಲದಲ್ಲಿ ಇತ್ತು. ವಿಧ್ಯುತ್ ಕಂಬ ಅಮರೇಗೌಡನ ಹೊಲದಲ್ಲಿತ್ತು ಎಂದು ನನ್ನ ಯಜಮಾನ ಹೇಳಿರುತ್ತಾನೆ ನಾನು ಹೇಳಿರುವುದಿಲ್ಲ. ಶಿವನಗೌಡ ಅಣ್ಣೆರ ಇವರ ಹಾಳು ಬಿದ್ದ ಹೊಲದಲ್ಲಿದ್ದ ಒಂದು ಕರೆಂಟ್ ಕಂಬ ಬಿದ್ದು ಕರೆಂಟ್ ಇರುವ ವೈಯರ್ ಸೋಲಾರ ಅಳವಡಿಸಿದ ತಂತಿಗಳ ಮೇಲೆ ಬಿದ್ದಿದ್ದರಿಂದ ಕರೆಂಟ್ ಹರಿದು ಶರಣಬಸವ ಈತನಿಗೆ ಶಾಕ್ ಹೊಡೆದು ಅವನ ಸಾವಿಗೆ ಕಾರಣವಾಗಿದೆ ಎಂದು ನಾನು ಹೇಳಿಕೆಯನ್ನು ಕೊಟ್ಟಿರುವುದಿಲ್ಲ ಆದರೆ ಅದನ್ನು ನನ್ನ ಯಜಮಾನ ಪೋಲಿಸರಿಗೆ ಕೊಟ್ಟಿರುತ್ತಾನೆ. ಸದರಿ ಭಾಗಶ: ಹೇಳಿಕೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ನಾನು ಪೋಲಿಸರಿಗೆ ಹೇಳಿಕೆಯನ್ನು ಕೊಟ್ಟಿರುವುದಿಲ್ಲ ನನ್ನ ಯಜಮಾನ ಹೇಳಿರುತ್ತಾರೆ.

ಈ ಪ್ರಕರಣದ ಅಪಘಾತ ಆಗುವುದಕ್ಕಿಂತ ಮುಂಚೆ ರಾತ್ರಿ ಭಾರಿ ಮಳೆಯಾಗಿತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು 3 ದಿನಗಳಿಂದ ಮಳೆ ಆಗುತ್ತಾ ಇತ್ತು ಎಂದು ಹೇಳುತ್ತಾರೆ. ಹೀಗಾಗಿ ಗದ್ದೆಗಳಲ್ಲಿ ನೀರು ನಿಂತಿದ್ದವು ಎಂದರೆ ಸರಿ. ಸದರಿ ಜಮೀನಿನ ಸುತ್ತಲು ಸೋಲಾರ ತಂತಿ ಹಾಕಿರುವ ಕಾರಣ ಜಮೀನಿನ ಒಳಗಡೆ ಹೋಗಲು ಬರುವುದಿಲ್ಲ ಎಂದರೆ ಸಾಕ್ಷಿಯು ಹೌದು ಅದನ್ನು ದಾಟಿ ಹೋಗುತ್ತಾರೆ ಎಂದು ಹೇಳುತ್ತಾರೆ. ಅದನ್ನು ದಾಟಿ ಹೋಗುತ್ತಾರೆ ಎಂದು ನಾನು ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸೋಲಾರ ತಂತಿ ಮುಟ್ಟಿದರೆ ಯಾವದೇ ಜೀವಕ್ಕೆ ಅಪಾಯ ಆಗುವುದಿಲ್ಲ ಎಂದರೆ ಸರಿ. ಕೆ.ಇ.ಬಿ. ಇಲಾಖೆಯವರು ನಿಮಗೆ 3 ಲಕ್ಷ ರೂಪಾಯಿಗಳ ಅಪಘಾತ ಪರಿಹಾರವನ್ನು ಕೊಟ್ಟಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ಹಣವನ್ನು ನಿಮ್ಮ ಯಜಮಾನರ ಕೈಯಲ್ಲಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮಗನು ವಿಧ್ಯುತ್ ತಂತಿಯನ್ನು ಹಿಡಿದು ಮೃತಪಟ್ಟಿರುವ ಕಾರಣ ನಾವು ಆರೋಪಿತರಿಗೆ ಪರಿಹಾರವನ್ನು ಕೇಳಿರುತ್ತೇವೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಆರೋಪಿತರು ಪರಿಹಾರವನ್ನು ನಮಗೆ ಕೊಡದೆ ಇರುವ ಕಾರಣ ನಾವು ಕೇಸು ಮಾಡಿರುತ್ತೇವೆ ಎಂದು ನನಗೆ ಗೊತ್ತಿರುವುದಿಲ್ಲ. ಕೆ.ಇ.ಬಿ. ಇಲಾಖೆಯಿಂದ ಪರಿಹಾರ ಪಡೆದುಕೊಂಡಿರುವ ಕಾರಣ ಅವರನ್ನು ಈ ಪ್ರಕರಣದಲ್ಲಿ ಆರೋಪಿತರನ್ನಾಗಿ ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಪೋಲಿಸರು ನನ್ನ ಹೇಳಿಕೆಯಲ್ಲಿ ಏನು ಬರೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಆರೋಪಿತರ ಯಾವುದೇ ಅಲಕ್ಷತನ ಇರದೆ ಇದ್ದರು ಸಹ ನಾವು ಸುಳ್ಳು ಕೇಸು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರು ನಮಗೆ ಪರಿಹಾರವನ್ನು ಕೊಡದೆ ಇರುವ ಕಾರಣ ನಾನು ಹಾಗೂ ನನ್ನ ಗಂಡ ಅವರ ವಿರುದ್ದ ಕೇಸು ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಜೆ.ಎಂ.ಎಫ್.ಸಿ., ದೇವದುರ್ಗ